ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್ತು
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
ದಿನಾಂಕ : DATE : 10/03/2020

### ಕೃಷ್ಣೆ ಭಾಗದ ಜನರ ಅಲಕ್ಷ್ಯ ಮುಂದುವರಿದರೆ ಅಖಂಡತೆಗೆ ಅಪಾಯ: ಎಸ್‌ಆರ್‌ಪಿ

# ಯುಕೆಪಿಗೆ ಕನಿಷ್ಠ 25 ಸಾವಿರ ಕೋಟಿ ಮೀಸಲಿಗೆ ಆಗ್ರಹ

**ವಿಕ ಸುದ್ದಿಲೋಕ** ಬೆಂಗಳೂರು 10/3/20

ಕೃಷ್ಣಾನದಿ ನೀರಿನಲ್ಲಿ ರಾಜ್ಯದ ಪಾಲು ಹಂಚಿಕೆಯಾಗಿ 10 ವರ್ಷ ಕಳೆದರೂ, ಬಳಕೆಗೆ ಬದ್ಧತೆಯ ಪ್ರಯತ್ನ ನಡೆಯದಿರುವ ಬಗ್ಗೆ ಉತ್ತರ ಕರ್ನಾಟಕ ಭಾಗದ ಜನರ ಸಹನೆಯ ಕಟ್ಟೆ ಹೊಡೆದಿದೆ. ಇದೇ ನಿರ್ಲಕ್ಷ್ಯ ಮುಂದುವರಿದರೆ ರಾಜ್ಯದ ಅಖಂಡತೆಗೆ ಅಪಾಯ ಬರಬಹುದು ಎಂದು ಪ್ರತಿಪಕ್ಷ ನಾಯಕ ಎಸ್.ಆರ್.ಪಾಟೀಲ್ ವಿಧಾನ ಪರಿಷತ್ತಿನಲ್ಲಿ ಸೋಮವಾರ ಸ್ಪಷ್ಟ ಎಚ್ಚರಿಕೆ ನೀಡಿದರು.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ''ಕೃಷ್ಣಾ ಮೇಲ್ದಂಡೆ ಯೋಜನೆಯನ್ನು (ಯುಕೆಪಿ-3) ಮುಂದಿನ 3 ವರ್ಷಗಳಲ್ಲಿ ಪೂರ್ಣಗೊಳಿಸಬೇಕು. 2020-21ನೇ ಸಾಲಿಗೆ ಕನಿಷ್ಠ 25 ಸಾವಿರ ಕೋಟಿ ರೂ. ಮೀಸಲಿಡಬೇಕು, ಈ ಯೋಜನೆ ಅನುಷ್ಠಾನಕ್ಕೆ ವೇಗ ಸಿಗಲು ಖಾಲಿ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಬೇಕು, ಭೂಸ್ವಾಧೀನಕ್ಕೆ ಪರಿಹಾರ ಮೊತ್ತವನ್ನು ಶೀಘ್ರ ನಿಗದಿ ಮಾಡಬೇಕು,'' ಎಂದು ಆಗ್ರಹಿಸಿದರು.

''2010ರಲ್ಲಿ ಕೃಷ್ಣಾ ನದಿ ನೀರು ಹಂಚಿಕೆಯಾಗಿದ್ದು, ದಶಕ ಕಳೆದರೂ ಅಧಿಸೂಚನೆ ಆಗಿಲ್ಲ. ಯೋಜನೆ ಅನುಷ್ಠಾನಕ್ಕೆ ಬದ್ಧತೆಯ ಪ್ರಯತ್ನ ನಡೆದಿದ್ದರೆ 7 ಜಿಲ್ಲೆಗಳ ಜನರ ಬದುಕು ಹಸನಾಗುತ್ತಿತ್ತು. ಕೃಷ್ಣಾ ಕಣಿವೆಯ ನೀರಾವರಿ ಯೋಜನೆಗಳು ಪೂರ್ಣ ಪ್ರಮಾಣದಲ್ಲಿ ಜಾರಿಯಾದರೆ ದಕ್ಷಿಣ ಕರ್ನಾಟಕವನ್ನು ಮೀರಿಸುವಂತೆ ಉತ್ತರ ಕರ್ನಾಟಕ ಅಭಿವೃದ್ಧಿ ಆಗಲಿದೆ. ಅಖಂಡ ಕರ್ನಾಟಕದ ಸಮಾನ ಅಭಿವೃದ್ಧಿಯ ಆಶಯ ಈಡೇರಬೇಕಾದರೆ ಯುಕೆಪಿ-3 ಹಾಗೂ ಮಹದಾಯಿ ಯೋಜನೆಗಳಿಗೆ ಒತ್ತು ಸಿಗಲೇಬೇಕು,'' ಎಂದು ಹೇಳಿದರು.

''ಕೃಷ್ಣಾ ಮೇಲ್ದಂಡೆ ಯೋಜನೆಗೆ 52 ಸಾವಿರ ಕೋಟಿ ರೂ. ವೆಚ್ಚವನ್ನು 2017ರಲ್ಲಿ ಅಂದಾಜು ಮಾಡಲಾಗಿದ್ದು, ಸದ್ಯ ಕನಿಷ್ಠ 75 ಸಾವಿರ ಕೋಟಿ ರೂ. ಅಗತ್ಯವಿದೆ. 3 ವರ್ಷಗಳಲ್ಲಿ ಪೂರ್ಣಗೊಳಿಸಲು ಈ ಸಲ ಕನಿಷ್ಠ 25 ಸಾವಿರ ಕೋಟಿ ರೂ. ಮೀಸಲಿಡಬೇಕು. ಸಿಎಂ ಒತ್ತಡಕ್ಕೆ ಮಣಿದು 10 ಸಾವಿರವನ್ನು ಘೋಷಣೆ ಮಾಡಿದ್ದರೂ, ಬಜೆಟ್ ಭಾಷಣದಿಂದ ಹೊರತಾದ ಈ ಘೋಷಣೆ ಬಗ್ಗೆಯೂ ಅನುಮಾನವಿದೆ. ಈ ಬೆಳವಣಿಗೆಯಿಂದ ಉತ್ತರ ಕರ್ನಾಟಕ ಭಾಗದ ಜನರಲ್ಲಿ ಆಕ್ರೋಶ ಮನೆಮಾಡಿದೆ,'' ಎಂದು ಎಚ್ಚರಿಸಿದರು.



''ಈ ಯೋಜನೆಯನ್ನು 'ರಾಷ್ಟ್ರೀಯ ಯೋಜನೆ' ಎಂದು ಘೋಷಿಸಿ ಕೇಂದ್ರದ ಮೇಲೆ ಹೊಣೆ ಹಾಕಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಪ್ರಯತ್ನವನ್ನು ಸಹಿಸುವುದಿಲ್ಲ. ಕೇಂದ್ರದಿಂದ ಹಣ ತನ್ನಿ ಅಥವಾ ಸಾಲ ಮಾಡಿ ಇಲ್ಲವೇ, ಬೇರಾವುದೇ ಮೂಲದಿಂದ ಹಣ ತಂದು ಯುಕೆಪಿ-3 ಪೂರ್ಣಗೊಳಿಸಿ. ರಾಷ್ಟ್ರೀಯ ಯೋಜನೆ ಎಂದು ಘೋಷಣೆ ಮಾಡುವ ಪ್ರಸ್ತಾಪವನ್ನು ನಮ್ಮ ಭಾಗದ ಜನತೆ ಯಾವ ಕಾರಣಕ್ಕೂ ಒಪ್ಪುವುದಿಲ್ಲ'' ಎಂದು ಅವರು ಸ್ಪಷ್ಟಪಡಿಸಿದರು.

### ಶೇ.15, 20 ಕಮಿಷನ್

**ಬ್ರಿಟೀಷರ ಕಾಲದಲ್ಲಿ ನಮ್ಮ ಭಾಗದಲ್ಲಿ ನಿರ್ಮಿಸಿರುವ ಸೇತುವೆಗಳು ಸುಸ್ಥಿತಿಯಲ್ಲಿವೆ. ಆದರೆ, ಈಗ ಕಟ್ಟುತ್ತಿರುವ ಸೇತುವೆಗಳು ಬಿದ್ದು ಹೋಗುತ್ತಿವೆ. ನೆರೆ, ಬರ ಬಂದರೆ ಕೆಲವರಿಗೆ ಖುಷಿಯಾಗುತ್ತದೆ. ಈಗಲೂ ನೆರೆ ಪರಿಹಾರ ಕೆಲಸದಲ್ಲಿ ಹಣ ಹೊಡೆಯುವುದು ನಡೆಯುತ್ತಿದೆ. ಸದ್ಯ ಕಾಮಗಾರಿಗಳ ಹಣದಲ್ಲಿ ರಾಜಕಾರಣಿಗಳಿಗೆ ಎಷ್ಟು, ಅಧಿಕಾರಿಗಳಿಗೆ ಎಷ್ಟು ಮತ್ತು ಇತರೆ ಉದ್ದೇಶಕ್ಕೆ ಎಷ್ಟು ಪಾಲು ಹಂಚಿಕೆಯಾಗುತ್ತಿದೆ ಎಂಬ ಮಾಹಿತಿಯನ್ನಾದರೂ ಬಹಿರಂಗಪಡಿಸಿ,'' ಎಂದು ಎಸ್.ಆರ್.ಪಾಟೀಲ್ ತಾಕೀತು ಮಾಡಿದರು. ಇದಕ್ಕೆ ಧ್ವನಿಗೂಡಿಸಿದ ಶರಣಪ್ಪ ಮಟ್ಟೂರ ''ರಾಜಕಾರಣಿಗಳು ಪ್ರತಿ ಕೆಲಸಗಳಲ್ಲೂ ಶೇ.15ರಿಂದ ಶೇ.20ವರೆಗೆ ಕಮಿಷನ್ ಪಡೆಯುತ್ತಿದ್ದಾರೆ. ಜನಪ್ರತಿನಿಧಿಗಳಾದವರಿಗೆ ಇದು ನಾಚಿಕೆ ತರಬೇಕು,'' ಎಂದು ಅಸಮಾಧಾನ ವ್ಯಕ್ತಮಾಡಿದರು.**

**ಕ್ಯಾಚ್ ದಿ ಪವರ್:** ''ಹುಕ್ ಆರ್ ಕುಕ್, ಕ್ಯಾಚ್ ದಿ ಪವರ್ ಎಂದು ಬಿಜೆಪಿ ವಾಮಮಾರ್ಗದಲ್ಲಿ ರಾಜ್ಯದಲ್ಲಿ ಅಧಿಕಾರ ಹಿಡಿಯಿತು. ಅಧಿಕಾರ ಹಿಡಿಯುವಲ್ಲಿನ ಉತ್ಸಾಹ ನಂತರ ಸಮರ್ಥ ಆಡಳಿತ ನೀಡುವಲ್ಲಿ ಇಲ್ಲವಾಗಿದೆ. ಎಲ್ಲ ರಂಗಗಳಲ್ಲಿ ಸರಕಾರ ವಿಫಲವಾಗಿದ್ದು, ರಾಜ್ಯಪಾಲರ ಮೂಲಕ ಸುಳ್ಳಿನ ಭಾಷಣ ಮಾಡಿಸಿದೆ. ರಾಜ್ಯಪಾಲರ ಭಾಷಣ ಉಪ್ಪು, ಖಾರ, ಮಸಾಲೆ, ಕನಿಷ್ಠ ಒಗ್ಗರಣೆಯೂ ಇಲ್ಲದ ಸಪ್ಪೆ ಭಾಷಣ,'' ಎಂದು ಪ್ರತಿಪಕ್ಷ ನಾಯಕ ಟೀಕಿಸಿದರು.

**ಕಳ್ಳರ ಕೈಗೆ ಕೀಲಿಕೈ:** ''ಕಳ್ಳತನ ನಿಲ್ಲಿಸಬೇಕಾದರೆ ಕಳ್ಳರ ಕೈಗೆ ಕೀಲಿಕೈ ಕೊಡಬೇಕಂತೆ. ಈ ಗಾದೆ ಮಾತಿನಂತೆ ಬಿಜೆಪಿ ವಾಮಮಾರ್ಗದಲ್ಲಿ ಅಧಿಕಾರ ಹಿಡಿಯಿತು ಎಂದು ಎಸ್.ಆರ್.ಪಾಟೀಲ್ ಟೀಕಿಸಿದಾಗ ಆಡಳಿತ ಪಕ್ಷದ ಕಡೆಯಿಂದ ತೀವ್ರ ವ್ಯಕ್ತವಾಯಿತು. ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಮತ್ತು ಪಾಟೀಲ್ ನಡುವೆ ಮಾತಿನ ಚಕಮಕಿ ನಡೆಯಿತು. ''ಪಾರದರ್ಶಕ ಮತ್ತು ಭ್ರಷ್ಟಾಚಾರಮುಕ್ತ ಆಡಳಿತ ನೀಡಿದ್ದರೆ ನಾನೇ ಸೆಲ್ಯೂಟ್ ಮಾಡುತ್ತಿದ್ದೆ. ಆದರೆ, ನೆರೆ ಸಂತ್ರಸ್ತರ ನೋವಿಗೂ ಈ ಸರಕಾರ ಸ್ಪಂದಿಸಿಲ್ಲ. ಮನೆ ಕಟ್ಟಲು 5 ಲಕ್ಷ ರೂ. ಘೋಷಣೆ ಮಾಡಿದ್ದ ಸರಕಾರ, 1 ಲಕ್ಷ ರೂ. ಕೊಟ್ಟು ಸುಮ್ಮನಾಗಿದೆ. ಪರಿಹಾರ ಧನ ಹಂಚಿಕೆಯಲ್ಲೂ ವ್ಯಾಪಕ ಭ್ರಷ್ಟಾಚಾರ ನಡೆದಿದೆ,'' ಎಂದು ಎಸ್.ಆರ್.ಪಾಟೀಲ್ ದೂರಿದರು.